ದಿನಾಂಕಃ 07-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ

**3**. ನಾನು ಜಿಲ್ಲಾ ಶಸ್ತ್ರಾಸ್ತ್ರ ಮೀಸಲು ಪಡೆಯ ಮುಖ್ಯ ಪೇದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ದಾಖಲೆ ಒದಗಿಸಬೇಕು ಎಂಬ ಸಂದರ್ಭ ಒದಗಿಲ್ಲ ಎಂದು ನುಡಿಯುತ್ತಾರೆ. ದಿಃ 29-09-2020 ರಂದು ನಾನು ಜಿಲ್ಲಾ ಶಸ್ತ್ರಗಾರದಲ್ಲಿ ಬೆಳಿಗ್ಗೆ 8-00 ಗಂಟೆಯಿಂದ ಮಧ್ಯಾಹ್ನ 1-00 ಗಂಟೆಯ ತನಕ ಕರ್ತವ್ಯ ಮಾಡಿರುತ್ತೇನೆ. ಆ ದಿನ ಬೆಳಿಗ್ಗೆ 8-00 ರಿಂದ 1-00 ಗಂಟೆಯ ತನಕ ಅಂಕೋಲಾ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಲು ನನಗೆ ರಹದಾರಿ ನೀಡಿದ್ದಾರೆ. ಆ ರಹದಾರಿಯಲ್ಲಿ ಆ ದಿನ ಪೂರ್ತಿ ಅಂಕೋಲಾ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಕರ್ತವ್ಯ ಮಾಡಲು ನಿಯೋಜಿಸಲಾಗಿದೆ. ಸಾಕ್ಷಿ ಸ್ವತಃ ಕರ್ತವ್ಯ ಮುಗಿಸಿ ನಾನು ಮೂಲ ಕಚೇರಿಗೆ ಅದೇ ದಿನ ಹೋಗಿದ್ದೇನೆ ಎಂದು ನುಡಿಯುತ್ತಾರೆ. ಆ ರಹದಾರಿ ಯಲ್ಲಿ ಇಷ್ಟು ಅವಧಿಗೆ ಎಂದು ನಿರ್ದಿಷ್ಟವಾಗಿ ಹೇಳಿಲ್ಲ . ಆದರೆ ನಿಯೋಜಿತ ಕೆಲಸ ಮಾಡಲು ಸೂಚಿಸಲಾಗಿದೆ. ಜಿಲ್ಲಾ ಶಸ್ತ್ರಗಾರಕ್ಕೆ ಬಂದೂಕು ವನ್ನು ಅನ್ಲೋಡ್ ಮಾಡಲು ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಕೋರಿದ ಪತ್ರವನ್ನು ನಾನು ನೋಡಿದ್ದೇನೆ. ಆ ಪತ್ರದಲ್ಲಿ ಯಾವ ಗುನ್ಹೆಯಲ್ಲಿ ಆ ಬಂದೂಕು ವನ್ನು ಅಮಾನತು ಪಡಿಸಲಾಗಿದೆ ಎಂದು ಹೇಳಿದೆಯಾ ಎಂದರೆ ಸಾಕ್ಷಿ ಅರಣ್ಯ ಗುನ್ಹೆ ಎಂಬುದಾಗಿ ಹೇಳಿರುವುದು ಮಾತ್ರ ನನಗೆ ನೆನಪಿದೆ ಎಂದು ನುಡಿಯುತ್ತಾರೆ. ಆ ರಹದಾರಿಯನ್ನು ಉಪ ವಲಯ ಅರಣ್ಯಾಧಿಕಾರಿಗೆ ಸಂಭೋಧಿಸಿ ನೀಡಲಾಗಿತ್ತು. ಆ ರಹದಾರಿ ಪತ್ರವನ್ನು ಉಪವಲಯ ಅರಣ್ಯಾಧಿಕಾರಿಗೆ ನೀಡಿದ್ದೇನೆ. ನನಗೆ ರಹದಾರಿ ನೀಡಿದ ಅಧಿಕಾರಿಯ ಹೆಸರು ಮತ್ತು ಪದನಾಮ ಹೇಳಲಾಗುವುದಿಲ್ಲ. ದಿಃ 29-09-2020 ರಂದು ವಲಯ ಅರಣ್ಯಾಧಿಕಾರಿ ಕಚೇರಿ,

ಅಂಕೋಲಾ ಕ್ಕೆ ಬಂದೂಕು ಅನ್ ಲೋಡ್ ಮಾಡಲು ನಿಯೋಜನೆ ಮಾಡಿದ್ದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

4. ನಾಡಬಂದೂಕನ್ನು ಯಾವುದೇ ಸರಕಾರಿ ಕಚೇರಿಯಲ್ಲಿ ಉಪಯೋಗಿಸುವುದಿಲ್ಲ ಎಂದರೆ ಸರಿ.ನಾಡ ಬಂದೂಕು ಪ್ಯಾರಾ ಮಿಲಿಟರಿ, ಪೋಲಿಸ್ ಇಲಾಖೆ, ಮಿಲಿಟರಿ ಹಾಗೂ ಜಿಲ್ಲಾ ಶಸ್ತ್ರಗಾರರಲ್ಲಿ ಉಪಯೋಗಕ್ಕೆ ಬಳಸುವುದಿಲ್ಲ ಎಂದರೆ ಸರಿ. ಸೆಕ್ಯೂರಿಟಿ ಗಾರ್ಡ್ ಗಳು ನಾಡ ಬಂದೂಕನ್ನು ಬಳಸುವುದಿಲ್ಲ ಎಂದರೆ ಸರಿ. ಆದ್ದರಿಂದ ನನಗೆ ನಾಡ ಬಂದೂಕನ್ನು ಲೊಡ್ ಮಾಡುವ ಹಾಗೂ ಅನ್ ಲೋಡ ಮಾಡುವ ತರಬೇತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಗನ್ ಪೌಡರ್ ಹಾಗೂ ಗುಂಡುಗಳನ್ನು ಬಳಸಿ ಬಂದೂಕನ್ನು ಲೊಡ್ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಬಂದೂಕಿನಲ್ಲಿ ಹ್ಯಾಮರ್ ವನ್ನು ಹಿಂದುಗಡೆ ಎಳೆದು ಇಟ್ಟಿರುವುದರಿಂದ ಆ ಬಂದೂಕು ಲೊಡ್ ಆಗಿದೆ ಎಂದು ದೃಢಪಡಿಸಿಕೊಂಡೆ. ಬಂದೂಕು ಲೊಡ್ ಆಗಿ ಇಲ್ಲದೆ ಇದ್ದಾಗಲೂ ಹ್ಯಾಮರ್ ಹಿಂದೆ ಎಳೆದಾಗ ಬರುತ್ತದೆ. ಬಂದೂಕಿನ ಗಜವನ್ನು ತೆಗೆದು ಬ್ಯಾರಲ್ ಮುಂಭಾಗದಿಂದ ಒಳಗೆ ತೂರಿಸಿದಾಗ ಲೊಡ್ ಆಗಿದ್ದರೆ ಸಂಪೂರ್ಣವಾಗಿ ಆ ಗಜ ಒಳಗೆ ಹೋಗದೆ ಇದ್ದರೆ ಬಂದೂಕು ಲೊಡ್ ಆಗಿದೆ ಎಂದು ಗೊತ್ತು ಪಡಿಸಲಾಗುವುದು ಮೇಲೆ ಹೇಳಿದಂತಹ ಹ್ಯಾಮರ್ ಹಿಂದುಗಡೆ ಎಳೆದಿರುವುದನ್ನು ಹಾಗೂ ಗಜವನ್ನು ಬ್ಯಾರಲ್ ನಲ್ಲಿ ತೂರಿಸಿ ನೋಡಿದ ವಿಧಾನದಿಂದ ಆ ಬಂದೂಕು ಲೊಡ್ ಆಗಿತ್ತು ಎಂದು ಗೊತ್ತು ಪಡಿಸಿಕೊಂಡೆ.

5. ನನ್ನನ್ನು ವಿಚಾರಣೆ ಮಾಡಿ ತನಿಖಾಧಿಕಾರಿ ನನ್ನ ಹೇಳಿಕೆ ಪಡೆದಿಲ್ಲ. ಸಾಕ್ಷಿ ಸ್ವತಃ ಪಂಚನಾಮೆಯಲ್ಲಿ ಸಹಿ ಮಾತ್ರ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಕೂಡ ಯಾವ ವಿಧಾನ ಬಳಸಿ ಗೊತ್ತು ಪಡಿಸಿಕೊಂಡೆ ಹಾಗೂ ಅನ್ ಲೋಡ್ ಮಾಡಿದೆ ಎಂದು ಬರೆದಿಲ್ಲ ಎಂದರೆ ಸರಿ. ಪಂಚನಾಮೆಯಲ್ಲಿ ನಾನು ಅನ್ ಲೋಡ್ ಮಾಡಿದೆ ಎಂದು ಹೇಳುವ ಬಂದೂಕಿನ ದಸ್ತು ಮತ್ತು ಬ್ಯಾರಲ್ ನ ಉದ್ದ ಹಾಗೂ ಅಗಲ ಹಾಗೂ ಅದಕ್ಕೆ ಅಳವಡಿಸಿದ ಇತರ ಸಾಮಾಗ್ರಿಗಳ ವಿವರಣೆ ಪಂಚನಾಮೆಯಲ್ಲಿ ವಿವರಿಸಿಲ್ಲ. ಬಂದೂಕನ್ನು ಮಧ್ಯಾಹ್ನ 12-30 ಯಿಂದ 1-00 ಗಂಟೆಯ ತನಕ ಅನ್ ಲೋಡ್ ಮಾಡಲು ಸಮಯ ತೆಗೆದುಕೊಂಡೆ.

ನಾನು ಹೊರಗೆ ತೆಗೆದೆ ಎಂದು ಹೇಳುವ ಮದ್ದು ಹರಳು ಹಾಗೂ ಧೂಳು ಮಿಶ್ರಿತ ವಾಗಿತ್ತು. ಧೂಳು ಹಾಗೂ ಹರಳು ಮಿಶ್ರಿತವಾಗಿದ್ದರೆ ಬ್ಯಾರಲ್ ನ ಒಳಗಡೆ ಅದು ಮೆತ್ತಿಕೊಂಡಿರುತ್ತದೆ ಎಂದರೆ ಸರಿ. ಆ ಬಂದೂಕು ಅನ್ ಲೊಡ್ ಮಾಡುವ ಪೂರ್ವದಲ್ಲಿ ಸಿಡಿದಿರುವ ಸ್ದಿತಿಯಲ್ಲಿ ಇರಲಿಲ್ಲ. ನಾನು ಹೇಳುವಂತಹ ಆ ಬಂದೂಕನ್ನು ಬಟ್ಟೆ ಸುತ್ತಿದ ಸ್ದಿತಿಯಿಂದ ತೆಗೆದು ನನಗೆ ಕೊಟ್ಟಿದ್ದಾರೆ. ಆ ಬಟ್ಟೆಯ ಮೇಲೆ ಅರಗನ್ನು ಹಚ್ಚಿ ಮೊಹರು ಮಾಡಲಾಗಿತ್ತು. ನಾನು ಹೇಳುವಂತಹ ಬಂದೂಕು ಲೊಡ್ ಆಗಿದ್ದಾಗ ಬೆಂಕಿಗೆ ತಗಲುವ ಸಂದರ್ಭವನ್ನು ಹೊರತು ಪಡಿಸಿ ಬೇರೆ ಸಮಯದಲ್ಲಿ ಅದು ಅಪಾಯಕಾರಿ ಅಲ್ಲ ಎಂದರೆ ಸರಿಯಲ್ಲ. ಲೋಡ್ ಆಗಿದ್ದಾಗ ಯಾರಾದರೂ ಟ್ರಿಗರಿ ಗೆ ಕೈ ತಾಗಿಸಿದರೆ ಅದು ಅಪಾಯಕಾರಿಯಾಗಿರುತ್ತದೆ. ಮದ್ದು ಮತ್ತು ಗುಂಡುಗಳನ್ನು ತುಂಬಿಸಿದ ಬಂದೂಕನ್ನು ನೆಲಕ್ಕೆ ಕುಕ್ಕಿದರೆ ಅದು ಸಿಡಿಯುವ ಸಾಧ್ಯತೆ ಇದೆ. ನಾಡ ಬಂದೂಕಿನ ಯಾಂತ್ರಿಕತೆ ಕುರಿತು ನನಗೆ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ಮದ್ದು ಮತ್ತು ಗುಂಡುಗಳನ್ನು ಮಾತ್ರ ತುಂಬಿದ ಬಂದೂಕು ಸಿಡಿಯುವುದಿಲ್ಲ ಹಾಗೂ ಅದಕ್ಕೆ ಸಿಡಿತಲೆ ಹಾಕಿದ್ದಾಗ ಮಾತ್ರ ಸಿಡಿಯುತ್ತದೆ ಎಂದರೆ ಸಾಕ್ಷಿ ಮದ್ದು ಗುಂಡುಗಳು ಮಾತ್ರ ಹಾಕಿದರೆ ಮಾತ್ರ ಸಿಡಿಯುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಲೊಡೆಡ್ ಅಂದರೆ ಸಿಡಿತಲೆ ಕೂಡ ತುಂಬಿಸಿ ಇಟ್ಟಿರುವಂತಹದ್ದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತಹ ಬಂದೂಕನ್ನು ಅನ್ ಲೊಡ್ ಮಾಡುವಾಗ ಅದರಲ್ಲಿ ಸಿಡಿತಲೆ ಇರಲಿಲ್ಲ. ನಾನು ಹೇಳಿದಂತಹ ಆ ಬಂದೂಕು ಅಪಾಯಕಾರಿಯಾಗಿರಲಿಲ್ಲ. ಬರಿ ಮದ್ದು ಹಾಗೂ ಗುಂಡುಗಳನ್ನು ತುಂಬಿಸಿದ ಬಂದೂಕನ್ನು ಕೆಳಗೆ ಬ್ಯಾರಲ್ ನ ಮಜಲ್ ಎಂಡ್ ನಿಂದ ಕೆಳಗೆ ಕುಕ್ಕಿದಾಗ ಮದ್ದು ಮತ್ತು ಗುಂಡುಗಳು ಕೆಳಗೆ ಬಿಳುತ್ತದೆ ಎಂದರೆ ಸರಿ.

6. ನಾನು ಆ ದಿನ ವಲಯ ಅರಣ್ಯಾಧಿಕಾರಿ ಕಚೇರಿಗೆ ಬಂದೆ ಹಾಗೂ ಬಂದೂಕಿನಿಂದ ಮದ್ದು ಗುಂಡುಗಳನ್ನು ಹೊರ ತೆಗೆದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿಃ 29-09-2020 ರಂದು ನನ್ನನ್ನು ವಲಯ ಅರಣ್ಯಾಧಿಕಾರಿ ಕಚೇರಿಗೆ ಕರೆಸಿದ್ದೆ ಇಲ್ಲ ಎಂದರೆ ಸರಿಯಲ್ಲ. ಸಿಡಿಸಿದ ಬಂದೂಕು ಬ್ಯಾರಲ್ ಒಳಗಡೆ ಕೈ ಬೆರಳಿನಿಂದ ಮುಟ್ಟಿ ನೋಡಿದಾಗ ಕಾರ್ಬನ್ ಬೆರಳಿಗೆ ಮೆತ್ತಿಕೊಳ್ಳುತ್ತದೆ ಎಂದರೆ ಸರಿ. ನಾನು ಬ್ಯಾರಲ್ ಒಳಗಡೆ ಆ ರೀತಿ ಕಾರ್ಬನ್ ಮೆತ್ತಿ ಕೊಂಡಿರುವ ಬಗ್ಗೆ ಪರಿಶೀಲಿಸಿಲ್ಲ. ಆರೋಪಿಗಳ ವಿರುದ್ಧ

ಸುಳ್ಳು ಸಾಕ್ಷಿ ಸೃಷ್ಟಿಸಲು ಮದ್ದು ಮತ್ತು ಗುಂಡುಗಳನ್ನು ವಲಯ ಅರಣ್ಯಾಧಿಕಾರಿ ಕಚೇರಿಯವರು ಸೃಷ್ಟಿಸಿ ನನ್ನಿಂದ ಪಂಚನಾಮೆ ಎನ್ನುವ ದಾಖಲೆಗೆ ಸಹಿ ಮಾತ್ರ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ವಲಯ ಅರಣ್ಯ ಕಚೇರಿಯವರು ಹಾಗೂ ನಾನು ಸರ್ಕಾರಿ ನೌಕರರಾಗಿರುವುದರಿಂದ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–2 ಮತ್ತು 3 ಹಾಗೂ ವಲಯ ಅರಣ್ಯಾಧಿಕಾರಿ ಎಮ್ ಪಿ . ನಾಯ್ಕ , ಹಾಗೂ ಇನ್ನೊಬ್ಬ ಅರಣ್ಯ ರಕ್ಷಕರು ಇದ್ದರು ಎಂದು ನಾನು ದಾಖಲೆ ನೋಡಿ ಹೇಳುತ್ತಿರುವುದು ವಿನಃ ಯಾರು ಇರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಬಂದೂಕನ್ನು ನಾನು ಸಾಕ್ಷಿ ನುಡಿಯಲು ಬಂದಾಗ ಪ್ರಥಮವಾಗಿ ನೋಡಿರುವುದಾಗಿದ್ದರೂ ಅದೇ ಬಂದೂಕನ್ನು ಅನ್ ಲೊಡ್ ಮಾಡಿದ್ದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ಬಂದೂಕನ್ನು ಕಡವೆ ಬೇಟೆಗೆ ಉಪಯೋಗಿಸಿದರು ಎಂದು ಕಚೇರಿಯಲ್ಲಿ ಹೇಳಿದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಾಡ ಬಂದೂಕು ಬಗ್ಗೆ ಯಾವುದೇ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ಸಿಡಿತಲೆ , ಬಂದೂಕಿನ ಭಾಗಗಳ ಬಗ್ಗೆ ಈಗ ಕೇಳಿ ತಿಳಿದುಕೊಂಡು ಬಂದು ಪೂರಕವಾಗಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಜಿಲ್ಲಾ ಶಸ್ತ್ರಾಸ್ತ್ರ ಮೀಸಲು ಪಡೆಯ ಮುಖ್ಯ ಪೇದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ಪೇದೆ ಎಂದು ಹೇಳುವ ಬಾಯಿ ಮಾತಿನ ಹೇಳಿಕೆ ಹೊರತು ಪಡಿಸಿ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.